# ನೆಗೆಟಿವ್ ಪಾತ್ರದ ಮಜವೇ ಬೇರೆ

■ ರಾಘವೇಂದ್ರ ಕೆ.

**ಚೈತ್ರಾ ರಾವ್**
**ಕಲರ್ಸ್ ಕನ್ನಡದ 'ಭಾರ್ಗವಿ ಎಲ್‌ಎಲ್‌ಬಿ'ಯ ಬೃಂದಾ**



◆ **ನಿಮ್ಮ ಪರಿಚಯ ಹೇಳಿ?**

ಹುಟ್ಟಿ ಬೆಳೆದದ್ದು ಬೆಂಗಳೂರು. ಬಿಕಾಂ ಪದವೀಧರೆ. ಅಮ್ಮ ಉಡುಪಿ ಜಿಲ್ಲೆ ಸಾಲಿಗ್ರಾಮ ಬಳಿಯ ಕೋಟದವರು. ಭರತನಾಟ್ಯವನ್ನು ಬಾಲ್ಯದಲ್ಲಿ ಅಭ್ಯಾಸ ಮಾಡುತ್ತಿದ್ದೆ. ಅದರ ಜೊತೆ ಹೇಗೋ ರಂಗಭೂಮಿಯ ನಂಟು ಬೆಳೆದಿದ್ದರಿಂದ ರಂಗ ತಾಲೀಮು ಆರಂಭವಾಯಿತು. ಅನೇಕ ನಾಟಕಗಳಲ್ಲಿ ನಟಿಸಿದ್ದೆ. ಅಲ್ಲಿಂದಲೇ ನಟನೆಯ ಪಯಣ ಆರಂಭವಾದರೂ ಓದನ್ನು ಮುಂದುವರಿಸಿದೆ. ಅಮ್ಮ ಕಲೆಯ ಚಟುವಟಿಕೆಯನ್ನು ಪ್ರೋತ್ಸಾಹಿಸಿದರು. ಓದುವ ಬಗ್ಗೆ ಅಷ್ಟೇ ನಿಖರವಾಗಿದ್ದರೂ. ಓದಿನಲ್ಲಿಯೂ ಎಂದೂ ಹಿಂದೆ ಬಿದ್ದವಳಲ್ಲ.

◆ **ಅಭಿನಯ ಆರಂಭಿಸಿದ್ದು ಹೇಗೆ?**

ಬಿಕಾಂ ಮುಗಿಯುತ್ತಿದ್ದಂತೆಯೇ ಕೆಲಸವೂ ಸಿಕ್ಕಿತು. ಆರು ತಿಂಗಳು ಕೆಲಸವನ್ನೂ ಮಾಡಿದೆ. ಆ ರೀತಿಯ ಕೆಲಸ ಮೊದಲಿನಿಂದಲೂ ಇಷ್ಟ ಇರಲಿಲ್ಲ. ಕ್ಯಾಮೆರಾ ಎದುರಿಸಿದ್ದ ನನಗೆ ಅದರ ಪ್ಯಾಶನ್ ಬೆಳೆದಿತ್ತು. ಅದಕ್ಕಿಂತ ಓದಿಗೆ ಆದ್ಯತೆ ನೀಡಲು ಅಮ್ಮ ಒತ್ತಡ ಹಾಕುತ್ತಿದ್ದರು. ಆ ಬಗ್ಗೆ ಅಮ್ಮನನ್ನು ಪ್ರಶ್ನೆ ಮಾಡುತ್ತಿದ್ದೆ. ಮೊದಲು ಓದು ಮುಗಿಸು ಆಮೇಲೆ ಏನಾದರೂ ಮಾಡು ಎಂದು ಅವರು ಸಲಹೆ ನೀಡುತ್ತಿದ್ದರು. ಕಂಪನಿ ಕೆಲಸ ಇಷ್ಟ ಆಗದೆ ಇರಲು ಮತ್ತೊಂದು ಕಾರಣ ಏನೆಂದರೆ, ಬೆಳಿಗ್ಗೆ 6.30ಕ್ಕೆ ಕಚೇರಿಯಲ್ಲಿ ಹಾಜರಿರಬೇಕಿತ್ತು. ಅದು ನನಗೆ ತುಂಬ ಕಷ್ಟ ಆಗುತ್ತಿತ್ತು. ಯಾರಪ್ಪ ಅಷ್ಟು ಬೇಗ ಎದ್ದು ಹೋಗುತ್ತಾರೆ ಎಂದು ಗೋಳಿಡುತ್ತಲೇ ಹೋಗುತ್ತಿದ್ದೆ. ಇದು ರಗಳೆ ಅನ್ನಿಸಿ, ಈ ಕೆಲಸ ಆಗಲ್ಲ ಎಂದುಕೊಳ್ಳುತ್ತಿದ್ದೆ. ಅಷ್ಟರಲ್ಲಿ ಆಗಲೇ ಕಸ್ತೂರಿ ವಾಹಿನಿಯಲ್ಲಿ ಸೀರಿಯಲ್ ಒಂದಕ್ಕೆ ಕರೆದರು. ಆಡಿಷನ್ ನೀಡಿದೆ, ಅಲ್ಲಿಂದ ಹಿಂದಿರುಗಿ ನೋಡಲೇ ಇಲ್ಲ.

◆ **ನಟನೆಯೇ ವೃತ್ತಿಯಾದ ಆರಂಭದ ದಿನಗಳು ಹೇಗಿದ್ದವು?**

ಕೆಲಸವನ್ನು ಬಿಟ್ಟು ಇನ್ನೇನೋ ಮಾಡುತ್ತಿದ್ದೇನೆ ಎಂದು ಅಮ್ಮ ಬೈಯುತ್ತಾರೆ ಎಂದು ಭಯಪಟ್ಟಿದ್ದೆ. ನನ್ನ ನಿರ್ಧಾರವನ್ನು ನನ್ನ ಬಾವ ಬೆಂಬಲಿಸಿದರು. 'ನಿನ್ನ ಬದುಕಿನಲ್ಲಿ ಆವಿಷ್ಕರಿಸಲು ಇದೇ ಸಕಾಲ. ಮರಳಿ ಕೆಲಸಕ್ಕೆ ಬರಲು ಅವಕಾಶ ಇದ್ದೇ ಇದೆ. ಚಿಕ್ಕವಯಸ್ಸು, ಈಗಲೇ ಬೇರೆ ಸಾಧ್ಯತೆಗಳನ್ನು ನೋಡಬೇಕು. ಪ್ರಯತ್ನ ಮಾಡು ತೊಂದರೆ ಇಲ್ಲ' ಎಂದು ಪ್ರೋತ್ಸಾಹದ ಮಾತುಗಳನ್ನು ಹೇಳಿದರು. ಅದು ನನಗೆ ತುಂಬ ಖುಷಿಕೊಟ್ಟಿತು. ಮೊದಲು ಏನಾದರೂ ಮಾಡಬೇಕು ಎಂದುಕೊಳ್ಳುತ್ತಿದ್ದ ಕ್ಷೇತ್ರದಲ್ಲಿ ಕೆಲಸ ಮಾಡುವ ಬಗ್ಗೆ ಕುತೂಹಲ ಹುಟ್ಟಿತು. ಭಿನ್ನ ಕೆಲಸ ಮಾಡುತ್ತಿದ್ದೀಯಾ ಒಳ್ಳೆಯದು ಎಂದು ಸ್ನೇಹಿತರು ಬೆಂಬಲಿಸಿದರು. ಅದರ ಬೆನ್ನಿಗೆ ಅಮ್ಮನಿಗೆ ಈ ಬಗ್ಗೆ ಹೇಳಿ ಅವರನ್ನೂ ಒಪ್ಪಿಸಿದೆ. ನನಗೆ ಒಳ್ಳೆಯ ಅವಕಾಶಗಳು ಸಿಕ್ಕವು. ಅಲ್ಲಿಂದ ಮತ್ತೆ ಹಿಂದಿರುಗಿ ನೋಡಲಿಲ್ಲ.

◆ **ಬೃಂದಾ ಪಾತ್ರವನ್ನು ಹೇಗೆ ತೆಗೆದುಕೊಂಡಿದ್ದೀರಿ?**

'ಜೋಡಿಹಕ್ಕಿ' ಮಾಡುತ್ತಿದ್ದಾಗ ಅದರಲ್ಲಿ ಪಲ್ಲವಿಗೌಡ ನೆಗೆಟಿವ್ ಪಾತ್ರವನ್ನು ನಿರ್ವಹಿಸುತ್ತಿದ್ದರು. ಅದನ್ನು ಸಿಕ್ಕಾಪಟ್ಟೆ ಎಂಜಾಯ್ ಮಾಡುತ್ತಿದ್ದೆ. ಅವರ ಅಭಿನಯವನ್ನು ಚಿಕ್ಕವಯಸ್ಸಿನಿಂದಲೂ ನಾನು ನೋಡುತ್ತಿದ್ದೆ. ಈ ರೀತಿಯ ಪಾತ್ರಗಳನ್ನು ಮಾಡುವುದು ಕಷ್ಟ ಎಂದುಕೊಂಡಿದ್ದೆ. 'ಹಿಂದೆ ಒಂದು ರೀತಿ ಮುಂದೆ ಮತ್ತೊಂದು ರೀತಿ' ಕಾಣಿಸಿಕೊಳ್ಳಬೇಕು. ಒಳ್ಳೆಯವಳಂತೆ ನಟಿಸಿ ಅದರ ಬೆನ್ನಿಗೆ ಮನೆ ಹಾಳು ಕೆಲಸ ಮಾಡುವುದು ತಮಾಷೆಯಲ್ಲ. ಇಂತಹ ಸವಾಲನ್ನು ಅನುಭವಿಸುವ ಸಂಬಂಧ ಮುಂದಿನ ಬಾರಿ ನಾಯಕಿ ಆಗುವುದಕ್ಕಿಂತ ಖಳನಾಯಕಿಯೇ ಆಗಬೇಕು ಎಂದು ಆಲೋಚಿಸಿದ್ದೆ. ಅಂತಹ ಪಾತ್ರವೇ ಸಿಕ್ಕಿತು. ಅನೇಕರು ಏಕೆ ನೆಗೆಟಿವ್ ಮಾಡುತ್ತೀಯಾ ಯೋಚನೆ ಮಾಡು ಎನ್ನುವ ಸಲಹೆಯನ್ನು ನೀಡಿದರು. 'ಭಾರ್ಗವಿ ಎಲ್‌ಎಲ್.ಬಿ'ಯಲ್ಲಿ ಅಂತಹ ಅವಕಾಶ ಸಿಕ್ಕಾಗ ಒಪ್ಪಿದೆ. ಬಾಲ್ಯದಿಂದಲೂ ನಟನೆಯನ್ನು ಕಲಿಯುತ್ತಿದ್ದರೂ ಇಲ್ಲಿ ಹೆಚ್ಚಿನದನ್ನು ಕಲಿಯುತ್ತಿದ್ದೇನೆ ಎಂದು ಅನ್ನಿಸಿದೆ. ತಂಡದ ತಾಂತ್ರಿಕ ವರ್ಗ ಕೂಡ ಸಾಕಷ್ಟು ಸಂಗತಿಯನ್ನು ಕಲಿಸುತ್ತಿದೆ. ಪ್ರತಿ ದೃಶ್ಯದಲ್ಲಿಯೂ ಹೊಸತನ್ನು ಕೊಡಬೇಕು. ಡೈಲಾಗ್‌ನಲ್ಲಿಯೂ ಬೇರೆಯ ಅರ್ಥವನ್ನು ಕೊಡಬಹುದೇ ಎನ್ನುವುದನ್ನು ಹುಡುಕುತ್ತೇನೆ. ಒಟ್ಟಾರೆ ಪಾತ್ರ ಒಳ್ಳೆಯ ಮಜಾ ಕೊಡುತ್ತಿದೆ. ಹೋದ ಕಡೆಯಲ್ಲೆಲ್ಲ 'ನಿನ್ನನ್ನು ನೋಡಿದರೆ ಟೀವಿ ಆಫ್ ಮಾಡಬೇಕು, ತೆಗೆದು ಎರಡು ಹೊಡೆಯೋಣ ಅನ್ನಿಸುತ್ತೆ' ಎನ್ನುತ್ತಾರೆ. ಇದನ್ನು ಕೇಳಿದಾಗಲೆಲ್ಲ ಆ ಪಾತ್ರಕ್ಕೆ ನ್ಯಾಯ ಕೊಡುತ್ತಿದ್ದೇನೆ ಎನ್ನುವ ಭಾವ ಮೂಡುತ್ತದೆ.

◆ **ಧಾರಾವಾಹಿಯನ್ನು ಎಳೆಯುತ್ತಿದ್ದಾರೆ ಎನ್ನುವ ಮಾತು ಇದೆಯಲ್ಲ ನೀವು ಏನಂತೀರಿ?**

ವೀಕ್ಷಕರಿಗೆ ಹಾಗೆ ಅನ್ನಿಸಬಹುದು. ಆದರೆ, ಕಥೆಗೂ ಒಂದು ಗ್ರಾಫ್ ಇದ್ದೇ ಇರುತ್ತದೆ. ಅದನ್ನು ನಾವು ಅನುಸರಿಸುತ್ತೇವೆ. ದಿಢೀರೆಂದು ಭಾರ್ಗವಿ ಸೋತಳು. ಇಲ್ಲವೇ ಗೆದ್ದಳು ಎಂದು ತೋರಿಸಬಹುದು. ಹಾಗೆ ಅಂದುಕೊಂಡರೆ, ಅದು ಪರಿಣಾಮಕಾರಿ ಎಂದು ಅನ್ನಿಸುವುದಿಲ್ಲ. ಜನರಿಗೆ ಪ್ರತಿ ಪಾತ್ರದ ಜೊತೆ ನಂಟು ಇರುತ್ತದೆ. ಕಥೆಯಲ್ಲಿ ಎಲ್ಲ ಪಾತ್ರಕ್ಕೂ ನ್ಯಾಯ ಸಲ್ಲಬೇಕು. ಆ ನಿಟ್ಟಿನಲ್ಲಿ ಇದು ಸರಿಯಾಗಿದೆ ಎಂದು ನನಗೆ ಅನ್ನಿಸುತ್ತದೆ.

◆ **'ಸುಧಾ' ಪತ್ರಿಕೆ ಓದುತ್ತೀರಾ?**

ಮನೆಯಲ್ಲಿ ತರಿಸುತ್ತಿದ್ದರು. ಅದರಲ್ಲಿ ಸಿನಿಮಾ ಪುಟಗಳನ್ನು ನೋಡುತ್ತಿದ್ದೆ. ಕಥೆಗಳನ್ನು ಓದುತ್ತಿದ್ದೆ. ಅದು ಈಗಲೂ ನೆನಪಿದೆ. ■